ಪಿಡಬ್ಲ್ಯೂ - 1

<u>ದಿನಾಂಕಃ 30.10.2023 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>

7. ಸ.ನಂ 262 ರಿಂದ 265 ರ ಸರ್ವೆ ನಂಬರ್ಗಳ ಜಮೀನುಗಳಿಗೆ ಸ.ನಂಬರ್ 266 ರಲ್ಲಿ ಇರುವ ರಸ್ತೆಯನ್ನೇ ಈಗಲೂ ಬಳಸುತ್ತಾರೆ ಎಂದರೆ ಸರಿಯಲ್ಲ. ಸದರಿ ಸ.ನಂ 262 ರಿಂದ 265 ಜಮೀನುಗಳಿಗೆ ಸ.ನಂ 266 ರಲ್ಲಿ ಇರುವ ವಾಡಿಕೆ ರಸ್ತೆಯನ್ನು ಹೊರತುಪಡಿಸಿ ಬೇರೆ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ಬೇರೆ ರಸ್ತೆ ಇರುವ ಬಗ್ಗೆ ದಾಖಲೆಗಳನ್ನು ನೋಡಿರುವುದಿಲ್ಲ. ಸ.ನಂ 261 ರಲ್ಲಿ ನಾನು ಹೇಳುವ ಅಂತಹ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ.

8. ದಿಃ 14.04.2019 ರಲ್ಲಿ ನಾನು ಸ.ನಂ 266 ರಲ್ಲಿ ಇರುವ ವಾಡಿಕೆ ರಸ್ತೆಯನ್ನು ತಡೆಯುವ ಉದ್ದೇಶದಿಂದ ಜೆ ಸಿ ಬಿ ಯಿಂದ ಟ್ರಂಚ್ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ದಿಃ 16.04.2019 ರಂದು ಊರಿನವರು ತಹಶೀಲ್ದಾರ್ ರವರಿಗೆ ಒಂದು ಮನವಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಊರಿನ ಗ್ರಾಮಸ್ಥರು ಎಲ್ಲರೂ ಸೇರಿ ನಾನು ಹಾಗೂ ನನ್ನ ಅಣ್ಣ ಶ್ಯಾಮಣ್ಣ ನವರ ವಿರುದ್ಧ ತಹಶೀಲ್ದಾರ್ ರವರಿಗೆ, ಜಿಲ್ಲಾಧಿಕಾರಿಗಳು ಶಿವಮೊಗ್ಗ ರವರಿಗೆ ಅರ್ಜಿ ನೀಡಿದ್ದರು ಎಂದರೆ ಸರಿಯಲ್ಲ. ದಿಃ 10.01.2020 ರಂದು ನಿರ್ದೇಶಕರು, ಸಹಾಯಕ ಭೂ ದಾಖಲೆಗಳರವರಿಗೆ ಊರಿನವರೆಲ್ಲರೂ ಸೇರಿ ಅದು ನನ್ನ ಖಾಸಗಿ ಜಾಗ ಅಲ್ಲ ಸರ್ಕಾರಿ ಜಾಗ ಆದ ಕಾರಣ ಎಲ್ಲರಿಗೂ ನೋಟಿಸು ನೀಡದೇ ಸರ್ವೆ ಬರಬೇಡಿ ಎಂದು ತಕರಾರು ನೀಡಿದ್ದರೂ ಎಂದರೆ ಸರಿಯಲ್ಲ. ಕಲ್ಲುಗುಡ್ಡ ಗ್ರಾಮದ ಗ್ರಾಮಸ್ಥಸರು ಸ.ನಂ 266 ಸರ್ಕಾರಿ ಜಾಗ ಅದು ಖಾಸಗಿ ಜಾಗ ಅಲ್ಲ ಅದನ್ನು ಎಲ್ಲರೂ ಬಳಸುತ್ತಿದ್ದೇವೆ ಎಂದು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ದಿಃ 09.02.2020 ರಂದು ಸಹ ಗ್ರಾಮ ಪಂಚಾಯಿತಿಗೆ ಊರಿನವರೆಲ್ಲರೂ ನಮ್ಮ ವಿರುದ್ಧ ದೂರು ನೀಡಿದ್ದರು ಎಂದರೆ ಸರಿಯಲ್ಲ. ನಾವು ಊರಿನ ಗ್ರಾಮಸ್ದರಿಗೆ ತೊಂದರೆ ನೀಡಿದ ಕಾರಣವೇ ಊರಿನವರೆಲ್ಲರೂ ಮೇಲಿನ ಎಲ್ಲಾ ಅರ್ಜಿಗಳನ್ನು ನೀಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ತಹಶೀಲ್ದಾರ್ ರವರು, ಗ್ರಾಮ ಪಂಚಾಯಿತಿಯವರು ಸ್ಥಳಕ್ಕೆ ಭೇಟಿ ನೀಡಿ ಯಾವುದೇ ಒತ್ತುವರಿ ಮಾಡಬಾರದು ಎಂದು ನನಗೆ ನಿರ್ದೇಶಿಸಿದ್ದರು ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳು ನನ್ನ ಗಮನದಲ್ಲಿ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ಸ.ನಂ 266 ರ ಸಂಪೂರ್ಣ ಜಮೀನು ಮೂಲತಃ ಇನಾಮ್ ಜಮೀನು ಎಂದರೆ ಸರಿ. ಇನಾಮ್ ರದ್ದಾಯಿತಿ ಕಾಯಿದೆ ನಂತರ ನನ್ನ ಅಜ್ಜ ಹಾಗೂ ತಂದೆ ಯಾವುದೇ ಮಂಜೂರಾತಿಗಾಗಿ ಅರ್ಜಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಅಂತಹ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 1956 ನೇ ಇಸವಿಯಲ್ಲಿ ನನ್ನ ಅಜ್ಜ, ನನ್ನ ತಂದೆ ಸ.ನಂ 266 ರಲ್ಲಿ 4 ಎಕರೆ ಜಮೀನನ್ನು ಸರ್ಕಾರಕ್ಕೆ ಶಿಕ್ಷಣದ ಸಲುವಾಗಿ ಭೂ ದಾನ ಮಾಡಿದ್ದರು ಎಂದರೆ ಸರಿ. ಆವತ್ತಿನಿಂದ ಸದರಿ 4 ಎಕರೆ ಸರ್ಕಾರದ ಹೆಸರಿನಲ್ಲಿ ಆರ್ ಟಿ ಸಿ ನಮೂದು ಆಗಿರುತ್ತದೆ ಎಂದರೆ ಸರಿ. ಉಳಿದ 7 ಎಕರೆ 39 ಗುಂಟೆ ನನ್ನ ತಂದೆ ಅಥವಾ ಅಜ್ಜ ಮರುಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದ ಕಾರಣ ಅದು ಸಹ ಸರ್ಕಾರಕ್ಕೆ ಸೇರಿದೆ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳ ಕೈ ತಪ್ಪಿನಿಂದ ನನ್ನ ಹೆಸರಿಗೆ ಆರ್ ಟಿ ಸಿ ಬಂದಿರುತ್ತದೆ ವಿನಃ ಇವತ್ತಿಗೂ ಸಹ ಸದರಿ ಜಮೀನು ಸರ್ಕಾರ ಹಾಗೂ ಊರಿನವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಆರ್ ಟಿ ಸಿ ಆಧಾರದ ಮೇಲೆ ನಾನು ಹದ್ದುಬಸ್ತಿಗೆ ಸರ್ವೆ ಮಾಡಲು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಸರ್ವೆ ಮಾಡವಾಗ ಅಕ್ಕಪಕ್ಕ ಹಿಡುವಳಿದಾರರಿಗೆ ಯಾವುದೇ ನೋಟಿಸನ್ನು ನೀಡಿಲ್ಲ ಎಂದರೆ ಸರಿಯಲ್ಲ. ಸರ್ವೆ ಅಧಿಕಾರಿಗಳು ಸ್ದಳಕ್ಕೆ ಸಹ ಬಂದಿರುವುದಿಲ್ಲ. ನಾನು ಅಧಿಕಾರಿಗಳೊಂದಿಗೆ ಸೇರಿ ವರದಿಯನ್ನು ಹಾಗೂ ನಕ್ಷೆಯನ್ನು ಸೃಷ್ಟನೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 9 ಸರ್ವೆ ಮಹಜರಿಗೆ ಸಹಿ ಮಾಡಿರುವ 4 ಜನರು ಊರಿನ ಗ್ರಾಮಸ್ಥರು ಅಲ್ಲ ಎಂದರೆ ಸರಿಯಲ್ಲ. ಆ ರೀತಿ ಕಂದಾಯ ಅದಿಕಾರಿಗಳೊಂದಿಗೆ ನಿಪಿ 9 ನ್ನು ಸೃಷ್ಟನೆ ಮಾಡಿಕೊಂಡು ನಂತರ ನಾನು ಸ್ವಾದೀನಕ್ಕೆ ಬರುವ ಪ್ರಯತ್ನ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನಗಾಗಲೀ, ನನ್ನ ತಂದೆಗಾಗಲೀ ಸ.ನಂ 266 ಎಲ್ಲಿ ಬರುತ್ತದೆ ಎಂದು ಚೆಕ್ಕುಬಂದಿ ಸಹ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ.

10. 1956 ನೇ ಇಸವಿಯಲ್ಲ ಸರ್ಕಾರಕ್ಕೆ ಶಿಕ್ಷಣಕ್ಕೆ ನೀಡಲಾಗಿ ಜಮೀನನ್ನು ಪ್ರಶ್ನಿಸಿ ನಾನು ಓ ಎಸ್ 259/1998 ದಾವೆಯನ್ನು ನಮ್ಮ ತಂದೆಯವರು ದಾಖಲು ಮಾಡಿದರು ಎಂದರೆ ಸರಿ. ಸದರಿ ದಾವೆ 2006 ರಲ್ಲಿ ವಜಾ ಆಗಿರುತ್ತದೆ ಎಂದರೆ ಸರಿ. ಜಮೀನಿನ ಮೌಲ್ಯ ಹೆಚ್ಚಾಗಿರುವ ಕಾರಣ ಸರ್ಕಾರಕ್ಕೆ ನಮೂದಾದ ದಾವಾ ಆಸ್ತಿ ಹಾಗೂ ಶಿಕ್ಷಣ ಉದ್ದೇಶಕ್ಕೆ ನೀಡಿ 4 ಎಕರೆ ಜಮೀನನ್ನು ಲಪಾಟಾಯಿಸುವ ಉದ್ದೇಶದಿಂದ ಈ ದಾವೆ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮೇಲೆ ನಾನು ಯಾವತ್ತಿಗೂ ಹಕ್ಕು ಸ್ವಾದೀನ ಹೊಂದಿಲ್ಲ ಎಂದರೆ ಸರಿಯಲ್ಲ. ದಾವಾ ಎ ಶೆಡ್ಯೂಲ್ ಆಸ್ತಿ ನಮ್ಮ ಹೆಸರಿನಲ್ಲಿ ಆರ್ ಟಿ ಸಿ ದಾಖಲೆ ದಾಖಲಾಗಿದ್ದರೂ ಸಹ ಸರ್ಕಾರಕ್ಕೆ ನಿಹಿತವಾಗಿದೆ ಎಂದರೆ ಸರಿಯಲ್ಲ. ಸದರಿ ಆಸ್ತಿ ನಮ್ಮ ಪೂರ್ವಜರು ಯಾರು

ಮರು ಮಂಜೂರಾತಿ ಅರ್ಜಿ ಸಲ್ಲಿಸದ ಕಾರಣ ನಮಗೆ ಯಾವುದೇ ಹಕ್ಕು ಸ್ವಾದೀನ ಇಲ್ಲ ಎದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ತಿಳಿದಿದ್ದರೂ ಸಹ ಊರಿನವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ.ನಂ 266 ರಲ್ಲಿ 4 ದೇವಸ್ಥಾನ, ರಸ್ತೆ, ಆಟನ ಮೈದಾನ, ಉಳಿಕೆ ಜಮೀನು ಗ್ರಾಮಸ್ಥರು ಒತ್ತುವರಿ ಮಾಡಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ದೇವಸ್ಥಾನ ರಸ್ತೆ, ಆಟನ ಮೈದಾನ, ಉಳಿಕೆ ಜಮೀನು ಗ್ರಾಮಸ್ಥರು ಒತ್ತುವರಿ ಮಾಡಿರುವುದು ಸುಮಾರು 100 ವರ್ಷಗಳಿಂದ ಇದೆ ಎಂದರೆ ಸರಿಯಲ್ಲ. ಸ.ನಂ 262 ರಿಂದ 265 ರ ಜಮೀನಿಗೆ ಸ.ನಂ 266 ರಸ್ತೆಯನ್ನು ಹೊರತುಪಡಿಸಿ ಬೇರೆ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಆಸ್ತಿ ಎಲ್ಲಿ ಇದೆ, ಅದರ ಚೆಕ್ಕುಬಂದಿ ಬಗ್ಗೆ ಸರಿಯಾಗಿ ತಿಳಿದುಕೊಳ್ಳದೇ ಈ ದಾವೆಯನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. 1955 ರಲ್ಲಿ ಆದ ಕುಟುಂಬದ ಹಿಸ್ಸಾ ಪತ್ರದ ಚೆಕ್ಕುಬಂದಿಗೂ ದಾವಾ ಸ್ವತ್ತಿನ ಚೆಕ್ಕಬಂದಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಉದ್ಯೋಗದಲ್ಲಿ ಇದ್ದು, ಯಾವಗಲೂ ಬೇರೆ ಬೇರೆ ಕಡೆಗಳಲ್ಲಿ ವಾಸಮಾಡುತ್ತಿದ್ದು, ದಾವಾ ಸ್ವತ್ತಿನಲ್ಲಿ ಯಾವತ್ತಿಗೂ ಸ್ವಾದೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ಜೆಎಂಎಫ್‌ಸಿ, ತೀರ್ಥಹಳ್ಳಿ